3. ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟೆರಿ ಆಫಿಸರವರು.
4. ಮೆ|| ವಿ. ರಾಘವಾಚಾರ್ಯರವರು.
5. ,, ಎ. ಅಂಜೈದ್ಯಪಂಡಿತರವರು.
6. ,, ಟಿ. ಎಸ್. ಮಿರ್ ಸವಾಲುದ್ದೀ ಅಲ್ಲೀಖಾ ಸಾಹೇಬರು.
7. ,, ಬಿ. ನರಸಿಂಗರಾಪುರವರು.

XVII. ಬೋರ್ಡಿನ ಮೀಟಿಂಗಿನಲ್ಲಿ ಹಾಜರಾಗಿದ್ದ ಸರ್ಕಾರಿ ಅಧಿಕಾರಿಯಲ್ಲದ ಮೆಂಬರುಗಳು ಮೆ|| ಟಿ. ಎಸ್. ಕೃಷ್ಣರಾಯರವರನ್ನು, ಫ್ಲೀಡರ್ ಮಿ|| ಬಿ. ನರಸಿಂಗರಾಯರವರನ್ನೂ ಸನ್ 1907ನೆ ಸಾಲಿನಲ್ಲಿ ನಡೆಯುವ ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ವಿಚಾರಗಳನ್ನು ಚರ್ಚಿಸುವದಕ್ಕಾಗಿ ಚುನಾಯಿಸಿದರು.

XVIII. ಮುಂದೆ ನಡೆಯಬೇಕಾದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು 1907ನೆ ಇಸವಿ ನವೆಂಬರು 2ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಗೆ ನಡೆಸುವಂತೆ ತೀರ್ಮಾನವಾಯಿತು.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಸ|| 1908ನೆ ಇಸವಿ ಫೆಬ್ರವರಿ ಮಾಹೆ 19ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳ ವರೆಗೂ, ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಗವರ್ನ್‌ಮೆಂಟಿನಿಂದ ತಲ್ಪಿರುವ 22—12—06ನೆ ಮುದ್ರಿಂ 5540-1—L. F. 495-05—4ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ಜಾತ್ರೆ ನಡೆಯುವ ರಾಮೆಪುರ ಗ್ರಾಮದ ಸಮೀಪದಲ್ಲಿ ಸಾಗವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ, ಮೈದಾನಿನಲ್ಲಿ ಪ್ರದರ್ಶನವು ನಡೆಯಲು ಏರ್ಪಡಿಸಿರುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ ಬಂದಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಬಂದಕ್ಕೆ ಬಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಪಸು ಬಂದಕ್ಕೆ ಬಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಎಮ್ಮೆ 1ಕ್ಕೆ ಬಂದನೆ ಬಹುಮಾನ 10 ರೂಪಾಯಿ, ಈ ರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಜುನಾಯಿಸಲು ಬಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದ ಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಅಂಯೋಗ್ಯತಾ ಪತ್ರವು (Certificate) ದೊರಿಯುತ್ತದೆ.

6. ಇನಾಂ ಪಡೆಯಲು ಲಾಯಕ್ಕಾಗಿರುವ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲಿ, ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಹೊನ್ನಾಳಿ ತಾಲ್ಲೂಕು ಅಮಲ್ದಾರ್‌ರವರಿಗೆ ಆಗಲಿ, ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ ಪ್ರದರ್ಶನ ಪುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ, ಬರೆದು ತಮ್ಮ ಹೆಸರು ಜಾನುವಾರು ತಪಶೀಲು ದಾಖಲ್ಮಾಡಿಸಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೆ ಆಗಲಿ, ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೆ ನೋಡಿಕೊಳ್ಳುವದು ಒಳ್ಳೆದು.

10. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡಿಯುತ್ತೆ.

11. 1907ನೆ ಇಸವಿ ಮಾರ್ಚ್ ತಿಂಗಳಲ್ಲಿ ಕೂಡ್ಲಿ ಜಾತ್ರೆ ಕಾಲದಲ್ಲಿ ನಡದ ಪ್ರದರ್ಶನ ಕಾಲದಲ್ಲಿ ಬಹುಮಾನ ಕೊಡಲ್ಪಟ್ಟವ್ಯಕ್ತರ ತಪಶೀಲು ಈ ಕೆಳಗೆ ನಮೂದಿಸಿರುತ್ತೆ.

ನಂಬರು.	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲು.		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಮೊಬಲಗು.	ಬಹುಮಾನದ ತರಗತಿ.
					ರೂ.	
1	ರುದ್ರಪ್ಪ ಬಿ ಶಿವಪ್ಪ	ನ್ಯಾಮತಿ	ಹೊನ್ನಾಳಿ ...	ಉಳುವ ಎತ್ತುಗಳ ಜೊತೆಗೆ.	20	1ನೆ ಬಹುಮಾನ
2	ರಾಮರಾವ್ ಬಿ ಹನ ಮಂತರಾವ್.	ಶಿವ್ಲಿಪುರ ...	ಶಿವಮೊಗ್ಗ ...	ಡಿಟೋ ...	10	2ನೆ ಡಿಟೋ
3	ಹಾಲಪ್ಪ ಬಿ ಹರಗಪ್ಪ...	ಸುಂಕದಕಟ್ಟೆ..	ಹೊನ್ನಾಳಿ ...	ಬೀಜದ ಹೋರಿ ಬಂದಕ್ಕೆ.	15	1ನೆ ಡಿಟೋ
4	ಮಹದೇವಪ್ಪ ಬಿ ಮಲ್ಲಪ್ಪ	ತ್ಯಾವಣಿಗಿ ...	ಚನ್ನಗಿರಿ ...	ಗಾಡಿ ಎತ್ತಿನ ಜೊತೆ 1ಕ್ಕೆ.	10	1ನೆ ಡಿಟೋ

ಎ. ವೇದಾಂತದೇಸಿಗಂ ಐಯ್ಯಂಗಾರ್,
ಫಾರ್ ಪ್ರೆಸಿಡೆಂಟ್.